ವಿಶಾಖ ಎನ್.

# ಪುಟಿದೆದ್ದ ಬಾಲಿವುಡ್: ರಾಣಿ ಬೆರಗು

ಇತ್ತೀಚೆಗೆ ಮುಂಬೈನಲ್ಲಿ 'ಎಫ್ಐಸಿಸಿಐ ಫ್ರೇಮ್ಸ್ 2024' ಎಂಬ ಕಾರ್ಯಕ್ರಮ ನಡೆಯಿತು. ಅದರಲ್ಲಿ ಮಾತನಾಡಿದ ನಟಿ ರಾಣಿ ಮುಖರ್ಜಿ 2023ರಲ್ಲಿ ಚಿತ್ರರಂಗವು ಸೆಟೆದೆದ್ದು ನಿಂತು, ಸಾಮಾಜಿಕ ಮಾಧ್ಯಮಗಳದ್ದು ಭ್ರಮಾಲೋಕ ಎನ್ನುವುದನ್ನು ರುಜುವಾತುಪಡಿಸಿತು ಎಂದು ಉದಾಹರಣೆಗಳ ಸಮೇತ ವಿವರಿಸಿದರು.

'ಪಠಾಣ್', 'ಜವಾನ್', 'ಗದರ್ 2', 'ಟೈಗರ್ 3', 'ಅನಿಮಲ್', 'ಲಿಯೊ', 'ಸಲಾರ್', 'ಜೈಲರ್', 'ಕ್ಯಾರಿ ಆನ್ ಜಟ್ಟಾ 3', 'ಆರ್‌ಡಿಎಕ್ಸ್' ಸಿನಿಮಾಗಳನ್ನು ಉದಾಹರಣೆಯಾಗಿ ನೀಡಿದ ರಾಣಿ ಮುಖರ್ಜಿ, ಈ ಎಲ್ಲ ಸಿನಿಮಾಗಳ ಬಾಕ್ಸ್ಆಫೀಸ್ ಗಳಿಕೆ ಉತ್ತಮವಾಗಿ ಇದ್ದುದನ್ನು ನೆನಪಿಸಿದರು. ಕೆಲವು ಚಿತ್ರಗಳಂತೂ ದಾಖಲೆಗಳನ್ನು ಪುಡಿಗಟ್ಟಿದ್ದು, ಪ್ರೇಕ್ಷಕರು ಸಿನಿಮಾಗಳನ್ನೇ ಹೆಚ್ಚಾಗಿ ಆಸ್ವಾದಿಸುತ್ತಾರೆ, ಸಾಮಾಜಿಕ ಮಾಧ್ಯಮಗಳ ಅಲ್ಪಕಾಲದ ಗುಳ್ಳೆಗಳಂತಹ ಸರಕನ್ನು ಅಲ್ಲ ಎನ್ನುವುದನ್ನು ಸಾಬೀತುಪಡಿಸಿತು ಎಂದೂ ಪ್ರತಿಪಾದಿಸಿದರು.

ಕೋವಿಡ್ ಕಾಲದಲ್ಲಿ ಜನರು ಮನೆಗಳಲ್ಲೇ ಉಳಿಯುವ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾದಾಗ ಒಟಿಟಿಗಳು ಜನಪ್ರಿಯವಾದವು. ಅಲ್ಲಿನ ಸಿನಿಮಾಗಳನ್ನು ಜನರು ಹೆಚ್ಚಾಗಿ ನೋಡಲಾರಂಭಿಸಿದರು. ಮುಂದೆ ಇದೇ ಟ್ರೆಂಡ್ ಮುಂದುವರಿಯುತ್ತದೆ ಎಂಬ ಭ್ರಮೆಯನ್ನು ಆ ಕಾಲಘಟ್ಟ ಸೃಷ್ಟಿಸಿತು. ಆದರೆ, ಅದು ವಾಸ್ತವ ಅಲ್ಲ ಎನ್ನುವುದನ್ನು 2023ರಲ್ಲಿ ಅನೇಕ ದೊಡ್ಡ ಬಜೆಟ್‌ನ, ತಾರಾನಟರ ಸಿನಿಮಾಗಳು ಸಾಬೀತುಪಡಿಸಿದವು. ಕೆಲವು ಮಧ್ಯಮ ಬಜೆಟ್‌ನ ಸಿನಿಮಾಗಳನ್ನೂ ಜನರು ಮುಗಿಬಿದ್ದು ನೋಡಿದರು. ಇವೆಲ್ಲವೂ ಚಿತ್ರರಂಗದ ಭವಿಷ್ಯದ ಕುರಿತು ಭರವಸೆಗಳನ್ನು ಹೆಚ್ಚಿಸಿದವು ಎಂದು ರಾಣಿ ಮುಖರ್ಜಿ ಹೇಳಿದಾಗ ಅನೇಕರಿಂದ ಕರತಾಡನ ಬಂತು.

ಚಿತ್ರಮಂದಿರಗಳಿಗೆ ಜನರು ಹೆಚ್ಚಾಗಿ ಬರಲಾರಂಭಿಸಿರುವುದರಿಂದ ಒಟಿಟಿ ವೇದಿಕೆಗಳು ಮುಂದಿನ ದಿನಗಳಲ್ಲಿ ಯಾವ ತಂತ್ರವನ್ನು ಅನುಸರಿಸಲಿವೆ ಎನ್ನುವ ಬಗೆಗಿನ ಕುತೂಹಲವೂ ರಾಣಿ ಮಾತಿನಲ್ಲಿ ಇತ್ತು. ■





# ಜನಮೆಚ್ಚಿದ ಹಾಡಿಗೆ ಚಿಕ್ಕಾಸೂ ಸಿಗಲಿಲ್ಲ

'ಎಂಜಾಯಿ ಎಂಜಾಮಿ' ತಮಿಳು ಗೀತೆ ದೊಡ್ಡಮಟ್ಟದ ಹಿಟ್ ಆಗಿ ಮೂರು ವರ್ಷಗಳು ಉರುಳಿವೆ. ಇದನ್ನೇ ನೆಪವಾಗಿಸಿಕೊಂಡು ಸ್ವರ ಸಂಯೋಜಕ ಸಂತೋಷ್ ನಾರಾಯಣನ್ ಇನ್‌ಸ್ಟಾಗ್ರಾಂ ಹಾಗೂ 'ಎಕ್ಸ್'ನಲ್ಲಿ ಪೋಸ್ಟ್ ಒಂದನ್ನು ಹಾಕಿದರು.

ಅವರ ಮಗಳು ಧೀ ಹಾಗೂ ಅರಿವು ಇಬ್ಬರ ಕಂಠದಲ್ಲಿ ಮೂಡಿಬಂದಿದ್ದ ಹಾಡು 'ಇಂಡಿ ಪಾಪ್' ಶೈಲಿಯಲ್ಲಿತ್ತು. ಭೂಮಿತಾಯಿಯನ್ನೂ ಒಳಗೊಂಡ ಅರ್ಥವತ್ತಾದ ಸಾಲುಗಳಿರುವ ಆ ಗೀತೆಯು ಯೂಟ್ಯೂಬ್‌ನಲ್ಲಿ ಬಹುಬೇಗ ದೊಡ್ಡ ಸಂಖ್ಯೆಯ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು. ಆ ಹಾಡಿನ ಯಶಸ್ಸಿನ ಕುರಿತು ಅನೇಕ ಲೇಖನಗಳೂ ಪ್ರಕಟಗೊಂಡಿದ್ದವು.

ಸಂತೋಷ್ ಪೋಸ್ಟ್‌ನಲ್ಲಿ ಸಂಭ್ರಮಕ್ಕಿಂತ ಹೆಚ್ಚಾಗಿ ಅಳಲೊಂದು ಎದ್ದುಕಂಡಿದೆ. ಆ ಹಾಡಿಗೆ ಅವರು, ಧೀ ಹಾಗೂ ಅರಿವು – ಯಾರಿಗೂ ಒಂದು ಚಿಕ್ಕಾಸೂ ಸಿಕ್ಕಿಲ್ಲ ಎನ್ನುವುದೇ ಆ ಅಳಲಿಗೆ ಕಾರಣ. 'ಮಾಜ್ಜಾ' ಎಂಬ ವೇದಿಕೆಯು ಭಾರತದಲ್ಲಿ ಸಂಗೀತವನ್ನು ಪ್ರಮೋಟ್ ಮಾಡುವ ಕೆಲಸದಲ್ಲಿ ತೊಡಗಿತ್ತು. 2021ರಲ್ಲಿ 'ಎಂಜಾಯಿ ಎಂಜಾಮಿ' ಹಾಡನ್ನು ಪ್ರಚಾರಪಡಿಸುವುದಲ್ಲದೆ ಸಾಮಾಜಿಕ ಜಾಲತಾಣದ ಹಲವು ವೇದಿಕೆಗಳಲ್ಲಿ ಅದಕ್ಕೆ ಹೆಚ್ಚು ಪ್ರೇಕ್ಷಕರನ್ನು ದಕ್ಕಿಸಿಕೊಡುವ ಉತ್ಸಾಹವನ್ನೂ ಅದು ತೋರಿಸಿತ್ತು. ಆಗ ಅದು ತಮಗೆ ವರವಾಗಬಹುದು ಎಂದೇ ಸಂತೋಷ್ ಭಾವಿಸಿದ್ದರು. ಆದರೆ, ಆದದ್ದೇ ಬೇರೆ.

ಹಾಡು ಇದ್ದ ಯೂಟ್ಯೂಬ್ ಚಾನಲ್‌ನ ಹಣವೆಲ್ಲ ತಮ್ಮ ಖಾತೆಗೆ ಬರುತ್ತಿಲ್ಲ ಎನ್ನುವುದು ಕ್ರಮೇಣ ಅರಿವಿಗೆ ಬಂತು. ಈ ವಿಷಯವಾಗಿ ಮಾಜ್ಜಾ ಸಂಸ್ಥೆಯವರಿಗೆ ಪತ್ರವನ್ನೂ ಬರೆದರು. ಅಲ್ಲಿಂದ ಉತ್ತರವೇ ಬರಲಿಲ್ಲ.

ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರೂ ಮೊದಲು ಮಾಜ್ಜಾ ವೇದಿಕೆಗೆ ಬೆಂಬಲ ವ್ಯಕ್ತಪಡಿಸಿದ್ದರು. ಭಾರತದಲ್ಲಿ ಅಂತಹುದೊಂದು ಪ್ರಯತ್ನ ಅಗತ್ಯ ಎಂದಿದ್ದರು. ಅವರಿಗೂ ವ್ಯಾವಹಾರಿಕವಾಗಿ ಏನೋ ತೊಡಕಿದೆ ಎಂದು ಅರಿವಾದದ್ದೇ ಆ ಸಂಸ್ಥೆಗೂ ತಮಗೂ ಯಾವ ಸಂಬಂಧವೂ ಇಲ್ಲ ಎಂದು ಅಧಿಕೃತವಾಗಿ ತಿಳಿಸಿದರು.

ಸಂತೋಷ್ ಪ್ರಕಾರ ರೆಹಮಾನ್ ಅವರಿಗೂ ಹಣಕಾಸಿನ ವಿಷಯದಲ್ಲಿ ಆ ಸಂಸ್ಥೆಯಿಂದ ಅನ್ಯಾಯವಾಗಿದೆ. ಅದಕ್ಕೇ ಅವರ ಎಲ್ಲ ಹಾಡುಗಳನ್ನೂ ಕೆಲವು ಆನ್‌ಲೈನ್ ವೇದಿಕೆಗಳಿಂದ ತೆಗೆಸಿದರು. ಇಷ್ಟಾಗಿಯೂ ಭಾವನಾತ್ಮಕವಾಗಿ ಈ ಹಾಡಿಗೆ ಸಿಕ್ಕಿರುವ ಸ್ಪಂದನದಿಂದ ತಮ್ಮ ಹೃದಯ ತುಂಬಿಬಂದಿದೆ ಎಂದೂ ಸಂತೋಷ್ ಬರೆದುಕೊಂಡಿದ್ದಾರೆ. ■